ಕರ್ನಾಟಕ ಸರ್ಕಾರ
ಕೃಷಿ ಇಲಾಖೆ

ಸಂ.ಬೆಸವಿ/ಜಕೃನಿ – ಪವ್ಯ-04/2020-21

ಕೃಷಿ ಆಯುಕ್ತಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು-01,
ದಿನಾಂಕ:10-02-2021.

ಇವರಿಗೆ,

ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು,

ವಿಷಯ: 2020-21ನೇ ಸಾಲಿನ ಹಿಂಗಾರು ಹಂಗಾಮಿನ ಬೆಳೆ ಸಮೀಕ್ಷೆ ಯೋಜನೆಯ ಕಾರ್ಯಚಟುವಟಿಕೆಗಳನ್ನು ವೇಳಾಪಟ್ಟಿಯ ಅನುಸಾರ ಅನುಷ್ಠಾನಗೊಳಿಸುವ ಕುರಿತು.
ಉಲ್ಲೇಖ: ಸರ್ಕಾರದ ಆದೇಶ ಸಂ: ಕೃಇ/83/ಕೃಕೈಉ/2020, ದಿನಾಂಕ:07.08.2020

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2020-21ನೇ ಸಾಲಿನ ಹಿಂಗಾರು ಹಂಗಾಮಿನ ಬೆಳೆ ಸಮೀಕ್ಷೆ ಯೋಜನೆಯನ್ನು ಸರ್ಕಾರದ ಆದೇಶದ ಪ್ರಕಾರ ಅನುಷ್ಠಾನಗೊಳಿಸುತ್ತಿದ್ದು, ಪ್ರಗತಿಯಲ್ಲಿರುತ್ತದೆ.

ಮುಂದುವರೆದು, ಬೆಳೆ ಸಮೀಕ್ಷೆ ಯೋಜನೆಯ ಅನುಷ್ಠಾನ ಪ್ರಗತಿಯನ್ನು ತೀವ್ರಗೊಳಿಸುವ ಸಲುವಾಗಿ ದಿನಾಂಕ:08-02-2021 ರಂದು ಕೃಷಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆಸಿದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಕುರಿತು ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

1. ವಿವಿಧ ಕಾರ್ಯಚಟುವಟಿಕೆಗಳನ್ನು ಈ ಕೆಳಗಿನ ವೇಳಾಪಟ್ಟಿಯನುಸಾರ ಕಡ್ಡಾಯವಾಗಿ ಅನುಸರಿಸಿ ಪೂರ್ಣ ಪ್ರಗತಿ ಸಾಧಿಸುವುದು.

| ಚಟುವಟಿಕೆ | ಪ್ರಾರಂಭ ದಿನಾಂಕ | ಮುಕ್ತಾಯ ದಿನಾಂಕ |
|---|---|---|
| ಹಿಂಗಾರು ಹಂಗಾಮಿನ ಬೆಳೆ ಸಮೀಕ್ಷೆ ಆಪ್ | 09.12.2020 | 15.02.2021 |
| ಮೇಲ್ವಿಚಾರಕರ ಪರಿಶೀಲನೆ | 01.01.2021 | 20.02.2021 |
| ರೈತರ ಬೆಳೆ ದರ್ಶಕ್ ಆಪ್ | 28.01.2021 | 20.02.2021 |
| ಬೆಳೆ ಮರು ಸಮೀಕ್ಷೆ ಆಪ್ | 25.01.2021 | 20.02.2021 |
| ಶೇ.1ರಷ್ಟು ತಾಕುಗಳ ಸಮೀಕ್ಷೆ ಮೇಲ್ವಿಚಾರಣೆ | 06.01.2021 | 20.02.2021 |
| ಬೆಳೆಗಳ ಮರುಹೊಂದಾಣಿಕೆ & ಮುಕ್ತಾಯ | 20.02.2021 | 28.02.2021 |

2. ಮೇಲ್ವಿಚಾರಣೆ ಸಮಯದಲ್ಲಿ ಮೇಲ್ವಿಚಾರಕರು ಅಗತ್ಯ ನಿಗಾ ವಹಿಸಿ ಬೆಳೆ ವಿವರಗಳನ್ನು ಮತ್ತು ಛಾಯಾಚಿತ್ರಗಳು ಹೊಂದಾಣಿಕೆಯಾಗುವ ಬಗ್ಗೆ ಖಾತರಿಪಡಿಸಿಕೊಂಡು ತಾಕುಗಳನ್ನು ಅನುಮೋದಿಸಲು ಸೂಕ್ತ ಮಾಹಿತಿಯನ್ನು ನೀಡುವುದು. (ರೈತರ ಮೊಬೈಲ್ ಆಪ್ ಮೂಲಕ ಸಂಗ್ರಹಿಸಿದ ಒಟ್ಟು 58259 ತಾಕುಗಳ ಪೈಕಿ ಕೇವಲ 40118 ತಾಕುಗಳ ಪರಿಶೀಲನೆ ಮಾತ್ರ ಪೂರ್ಣಗೊಳಿಸಿ ಶೇ.57.7ರಷ್ಟು ಪ್ರಗತಿ ಸಾಧಿಸಲಾಗಿದ್ದು, 18141 ತಾಕುಗಳು ಹಾಗೂ ಖಾಸಗಿ ನಿವಾಸಿಗಳ ಆಪ್ ಮೂಲಕ ಸಂಗ್ರಹಿಸಿದ ಒಟ್ಟು 10926750 ತಾಕುಗಳ ಪೈಕಿ ಕೇವಲ 10463000 ತಾಕುಗಳ ಪರಿಶೀಲನೆ ಪೂರ್ಣಗೊಳಿಸಿ ಶೇ.95.9 ರಷ್ಟು ಪ್ರಗತಿ ಸಾಧಿಸಲಾಗಿದ್ದು, 463750 ತಾಕುಗಳ ಪರಿಶೀಲನೆ ಬಾಕಿ ಉಳಿದಿದ್ದು, ಕೂಡಲೇ ಪೂರ್ಣಗೊಳಿಸುವುದು).

3. ಆಧಾರ ವಿವರಗಳನ್ನು ಅಪ್ ಮೂಲಕ ಮತ್ತು FRUIT ತಂತ್ರಾಂಶದಲ್ಲಿ ಅಪ್ ಲೋಡ್ ಮಾಡುವುದು ಹಾಗೂ ಪ್ರಸ್ತುತ ನಿಗದಿಪಡಿಸಿರುವ ಗುರಿಗಳಿಗೆ ಅನುಗುಣವಾಗಿ ದಿನಾಂಕ: 28.02.2021 ಕ್ಕೆ ಕಡ್ಡಾಯವಾಗಿ ಶೇ.50 ರಷ್ಟು ಪ್ರಗತಿಯನ್ನು ಸಾಧಿಸಲು ಅಗತ್ಯ ಕ್ರಮ ಕೈಗೊಳ್ಳುವುದು. (FRUITS ತಂತ್ರಾಂಶದಲ್ಲಿ ದಾಖಲಿಸುವ ಕಾರ್ಯಕ್ಕೆ ಆದ್ಯತೆಯನ್ನು ನೀಡುವುದು).

4. ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯವರು ಶೇ.1 ರಷ್ಟು ಸಮೀಕ್ಷೆ ಮೇಲ್ವಿಚಾರಣೆಯನ್ನು ನಡೆಸಲು ಕ್ರಮ ಕೈಗೊಳ್ಳುವುದು. (ಒಟ್ಟು ಗುರಿ 5712 ಗ್ರಾಮಗಳ ಪೈಕಿ ಕೇವಲ 3566 ಗ್ರಾಮಗಳ ಮೇಲ್ವಿಚಾರಣೆ ಮಾತ್ರ ಕೈಗೊಂಡಿದ್ದು, ಉಳಿದ 2146 ಗ್ರಾಮಗಳ ಮೇಲ್ವಿಚಾರಣೆಯನ್ನು ಕೂಡಲೇ ಪೂರ್ಣಗೊಳಿಸುವುದು.)

5. 2019-2020ರ ವಿವಿಧ ಹಂಗಾಮುಗಳಲ್ಲಿ ಖಾಸಗಿ ನಿವಾಸಿಗಳು ಗೌರವ ಧನಕ್ಕೆ ಸಂಬಂಧಿಸಿದಂತೆ ಪಾವತಿಸಲು ಬಾಕಿ ಇರುವ ಪ್ರಸ್ತಾವನೆಗಳ ಮಾಹಿತಿಯನ್ನು ಕಾರಣಗಳೊಂದಿಗೆ ಜಿಲ್ಲೆಗಳಿಗೆ ಈಗಾಗಲೇ ಇ-ಮೇಲ್ ಮೂಲಕ ಕಳುಹಿಸಿದ್ದು, ನ್ಯೂನ್ಯತೆಗಳನ್ನು ಸರಿಪಡಿಸಿ ಕ್ರಮ ಕೈಗೊಳ್ಳುವುದು.

6. ಬೆಳೆ ಸಮೀಕ್ಷೆಗೆ ಬಾಕಿ ಉಳಿಸಿಕೊಂಡಿರುವ ತಾಕುಗಳನ್ನು ಸಂಬಂಧಪಟ್ಟ ಜಿಲ್ಲೆಗಳು ಕೂಡಲೇ ಶೇ.100 ರಷ್ಟುಪ್ರಗತಿಯನ್ನು ಸಾಧಿಸುವುದು.

7. ರೈತರ ಬೆಳೆ ದರ್ಶಕ ಆಪ್ ಅನ್ನು ಈಗಾಗಲೇ ಬಳಕೆಗಾಗಿ ಬಿಡುಗಡೆಗೊಳಿಸಿದ್ದು, ಖಾಸಗಿ ನಿವಾಸಿಗಳ ಸಹಾಯದಿಂದ ರೈತರಲ್ಲಿ ಹೆಚ್ಚಿನ ಅರಿವನ್ನು ಮೂಡಿಸಿ ಆಕ್ಷೇಪಣೆಗಳನ್ನು ಸಕಾಲದಲ್ಲಿ ಪರಿಶೀಲಿಸಿ ಮರು ಸಮೀಕ್ಷೆಯನ್ನು ಸಹ ಏಕ ಕಾಲದಲ್ಲಿ ಕೈಗೊಳ್ಳುವುದು.

8.ಬೆಳೆ ಸಮೀಕ್ಷೆಗೆ ಸಂಬಂಧಪಟ್ಟ ಯಾವುದೇ ವಿಷಯಗಳ ಕುರಿತಾದ ಪ್ರಸ್ತಾವನೆಗಳನ್ನು ನೇರವಾಗಿ cropsurveykarnataka / cropsurveyhelpdesk ಇವರಿಗೆ ಸಲ್ಲಿಸದೆ, ಸಮುಚಿತ ಮಾರ್ಗದ ಮೂಲಕ ಸಂಬಂಧಪಟ್ಟ ಪ್ರಾಧಿಕಾರಿಗಳಿಂದ cropsurveyagri2020@gmail.com ಇ-ಮೇಲ್ ಗೆ ಮಾತ್ರ ಸಲ್ಲಿಸುವುದು.

9. ಬೆಳೆ ಸಮೀಕ್ಷೆಯಲ್ಲಿ ದಾಖಲಾಗುತ್ತಿರುವ ಬಿತ್ತನೆ ವಿವರಗಳು ಹಾಗೂ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಗೆ ನೀಡುತ್ತಿರುವ ಬಿತ್ತನೆ ವಿವರಗಳಲ್ಲಿ ತುಂಬಾ ವ್ಯತ್ಯಾಸಗಳು ಕಂಡು ಬರುತ್ತಿದ್ದು, ಈ ಕುರಿತು ಸೂಕ್ತ ಕ್ರಮ ಕೈಗಂಡು ಬೆಳೆ ಮರುಹೊಂದಾಣಿಕೆ ಸಮಯದಲ್ಲಿ ಸರಿಪಡಿಸಿಕೊಳ್ಳುವುದು.

10. ಬೆಳೆಗಳ ಮರುಸಮೀಕ್ಷೆ ಮತ್ತು ರೈತರಿಂದ ಸಲ್ಲಿಕೆಯಾಗುವ ಆಕ್ಷೇಪಣೆಗಳನ್ನು ಯಾವುದೇ ಕಾರಣಕ್ಕೂ ವ್ಯಪಗತಗೊಳಿಸದೆ ಸಕಾಲದಲ್ಲಿ ಇತ್ಯರ್ಥಪಡಿಸಲು ಕ್ರಮ ಕೈಗೊಳ್ಳುವುದು (ಮುಂಗಾರು ಮತ್ತು ಹಿಂಗಾರು ಹಂಗಾಮು).

ಈ ಎಲ್ಲಾ ಅಂಶಗಳ ಕುರಿತು ಶೀಘ್ರವಾಗಿ ಕ್ರಮ ಕೈಗೊಳ್ಳಲು ಸೂಚಿಸಿದೆ.

12/02/21
ಕೃಷಿ ಆಯುಕ್ತರು

ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ:

1. ಮಾನ್ಯ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು, ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಮಾನ್ಯ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು, ಸಿಆಸುಇ (ಇ-ಆಡಳಿತ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.
4. ಎಲ್ಲಾ ಜಿಲ್ಲಾ ಜಿಲ್ಲಾಧಿಕಾರಿಗಳಿಗೆ.